ಮಂಜೂರಾದ ರಾಷ್ಟ್ರೀಯ ಹೆದ್ದಾರಿಗಳ ಉದ್ದ.

352-ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ನಮ್ಮ ರಾಜ್ಯಕ್ಕೆ ಭಾರತ ಸರ್ಕಾರದಿಂದ ಇತ್ತೀಚೆಗೆ ಮಂಜೂರಾದ ರಾಷ್ಟ್ರೀಯ ಹೆದ್ದಾರಿಗಳ ಒಟ್ಟು ಉದ್ದ ಎಷ್ಟು (ಕಿ.ಮೀ. ಗಳಲ್ಲಿ)*

ಆ) *ಬೈಪಾಸ್ ರಸ್ತೆಗಳು ಸೇರಿದಂತೆ ರಸ್ತೆಗಳ ಅಂದಾಜು ವೆಚ್ಚವೆಷ್ಟು?*

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಯಾವುದೂ ಇಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಸೂಳೆಕೋಟಿ ಹತ್ತಿರ ಸೇತುವೆ ಕೆಲಸ

451-ಶ್ರೀ ಕೆ.ಎಸ್. ಕಾಳಮರಿಗೌಡ (ಪಿರಿಯಾಪಟ್ಟಣ): ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಪಿರಿಯಾಪಟ್ಟಣ ತಾಲ್ಲೂಕಿನ ಸೂಳೆಕೋಟಿ ಹತ್ತಿರ ಒಂದು ಸೇತುವೆ ಕಟ್ಟಲು ಮಂಜೂರಾಗಿದ್ದು ಸುಮಾರು 20 ಲಕ್ಷ ರೂ.ಗಳು ಖರ್ಚಾಗಿದ್ದು ಇನ್ನೂ ಅರ್ಧ ಕೆಲಸ ಹಾಗೆಯೇ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದರೆ ಅದಕ್ಕೆ ಕಾರಣಗಳೇನು? ಮತ್ತು ಅದನ್ನು ಯಾವಾಗ ಪೂರೈಸಲಾಗುವುದು?*

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು):

ಅ) ಬಂದಿದೆ.

ಆ) ಜಿಲ್ಲಾಪರಿಷತ್‌ಗೆ ಈ ಕೆಲಸವನ್ನು 1987ರಲ್ಲಿ ಹಸ್ತಾಂತರಿಸಿದ್ದು, ಸಾಕಷ್ಟು ಅನುದಾನವಿಲ್ಲದಿದ್ದ ಕಾರಣ ಹಾಗೂ ಕೂಡುರಸ್ತೆಯ ಭೂ ಸ್ವಾಧೀನದಲ್ಲಿ ವಿಳಂಬವಾದುದರಿಂದ ಸೇತುವೆಯ ಕಾರ್ಯವನ್ನು ಮುಂದುವರೆಸಿರಲಿಲ್ಲ. ಜಿಲ್ಲಾ ಪರಿಷತ್‌ನಿಂದ ಈ ದೊಡ್ಡ ಮೊತ್ತದ ಕಾಮಗಾರಿಯನ್ನು ನಿರ್ವಹಿಸುವುದು ಸಾಧ್ಯವಿಲ್ಲವೆಂಬುದನ್ನು ಉನ್ನತಾಧಿಕಾರ ಸಮಿತಿಯು ನಿರ್ಣಯಿಸಿ ದಿನಾಂಕ 12.6.91 ರಲ್ಲಿ ಲೋಕೋಪಯೋಗಿ ಇಲಾಖೆಗೆ ವಹಿಸಿಕೊಳ್ಳಲಾಗಿದೆ. ಕರ್ನಾಟಕ ರಾಜ್ಯ ನಿರ್ಮಾಣ ನಿಗಮದವರಿಗೆ ಕಾಮಗಾರಿಯನ್ನು 91-92ರಲ್ಲಿ ವಹಿಸಲಾಗಿದ್ದು, ಅನುದಾನವನ್ನು ಅನುಸರಿಸಿ 93-94ರ ಅವಧಿಯಲ್ಲಿ ಪೂರ್ಣಗೊಳಿಸುವ ಕಾರ್ಯಕ್ರಮವಿದೆ.

ತ್ಯಾಮಗೊಂಡ್ಲು ಕಳಪಟ್ಟ ರಸ್ತೆಯಲ್ಲಿರುವ ಕಾಸ್‌ವೇ ನಿರ್ಮಾಣ ಕಾರ್ಯ.

68-ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ನೆಲಮಂಗಲ ತಾಲ್ಲೂಕು ತ್ಯಾಮಗೊಂಡ್ಲು ಕೆಳಪಟ್ಟ ರಸ್ತೆಲ್ಲಿರುವ ಕಾಸ್ ವೇ ಬಹಳ ದಿನಗಳಿಂದ ನಿರ್ಮಾಣವಾಗದೇ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ, ಈ ಸಂಬಂಧ ಸರ್ಕಾರದಿಂದ ತೆಗೆದುಕೊಂಡ ಕ್ರಮವೇನು?*

ಇ) *ಈ ಕಾಮಗಾರಿಯನ್ನು ಪ್ರಾರಂಭಿಸಲು ಎಷ್ಟು ಕಾಲಾವಕಾಶ ಬೇಕಾಗುವುದು?*

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಬಂದಿದೆ.

ಆ) ಈ ಕಾಮಗಾರಿಯನ್ನು 1993-94ನೇ ಸಾಲಿನಲ್ಲಿ ತೆಗೆದುಕೊಳ್ಳುವ ಪ್ರಸ್ತಾವವಿದೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ವಿವಿಧ ಹಂತಗಳ ನ್ಯಾಯಲಯಗಳಲ್ಲಿ ಸೇವೆ ಸಲ್ಲಿಸುತ್ತಿರುವ ನ್ಯಾಯಾಧೀಶರುಗಳ ಬಗ್ಗೆ

03-ಶ್ರೀ ಹರ್ಷಕುಮಾರ ಗೌಡ (ಚಾಮರಾಜ): ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿರುವ ವಿವಿಧ (ಹಂತಗಳು) ನ್ಯಾಯಾಲಯಗಳಲ್ಲಿ ಸೇವೆ ಸಲ್ಲಿಸುತ್ತಿರುವ ನ್ಯಾಯಾಧೀಶರುಗಳ ಸಂಖ್ಯೆ ಎಷ್ಟು?*

ಆ) *ರಾಜ್ಯದಲ್ಲಿ, ಸರ್ಕಾರದವರು ಹೊಸದಾಗಿ ಪ್ರಾರಂಭ ಸಲ್ಲಿಸುವ ನ್ಯಾಯಾಲಯಗಳಷ್ಟು? ಹಾಗೂ ಅವುಗಳನ್ನು ಯಾವ ತಾಲ್ಲೂಕು ಸ್ಥಳಗಳಲ್ಲಿ ಪ್ರಾರಂಭಿಸಲಾಗುವುದು?*

ಶ್ರೀ ಹಾರನಹಳ್ಳಿ ರಾಮಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

ಅ) 1. ಜಿಲ್ಲಾ ನ್ಯಾಯಾಧೀಶರು, ಸೂಪರ್ ಟೈಂ ಜಿಲ್ಲಾ ನ್ಯಾಯಾಧೀಶರು ಸೇರಿ 86.ಅನ್ಯ ಸೇವೆಯ ಮೇರೆಗೆ ಕೆಲಸ ನಿರ್ವಹಿಸುತ್ತಿರುವ ನ್ಯಾಯಾಧೀಶರನ್ನು ಸೇರಿಸಿ.

2. ಸಿವಿಲ್ ನ್ಯಾಯಾಧೀಶರು 123

3. ಮುನ್ಸಿಫ್ ನ್ಯಾಯಧೀಶರು 226

ಆ) ರಾಜ್ಯದ ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ವಿವಿಧ ರೀತಿಯ 90ನ್ಯಾಯಲಯಗಳನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. ಅವುಗಳ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ANNEXURE

BANGALORE CITY

1. Creation of 26 Additional Courts in Bangalore City Viz.,
   a. Eight Additional Courts of City of Small Causes.
   c. Ten Additional Chief Metropolitan Magistrates Courts.
   d. Three Metropolitan Magistrate Courts (Traffic).
2. Creation of the post of XXIII Addl. City Civil & Sessions Judge, B'lore City for trial of cases under the Prevention of Corporation Act.
3. Creation of two posts i.e., II and III Additional Principal Judge to the Family Court, Bangalore.